ವೇಸ್ಟ್ ಡಂಪ್ಸ್‌ಗಳನ್ನು ತೆಗೆಯಲು ಮೆ: ಬ್ಲಾಕ್ ಗೋಲ್ಡ್ ಮೈನ್ಸ್‌ಗೆ ಅನುಮತಿ ನೀಡಿದ ಸಮಯದಲ್ಲಿ ಮೆ: ಬ್ಲಾಕ್ ಗೋಲ್ಡ್ ಮೈನ್ಸ್ ಸಂಸ್ಥೆಯವರು ಹಳೆಯ ಡಂಪ್ಸ್ ಜೊತೆಗೆ ಹೊಸ ಅದಿರನ್ನು ಸಾಗಿಸಿರುವ ಬಗ್ಗೆ ವರದಿಯನ್ನು ನೀಡಿರುತ್ತದೆ ಹಾಗೂ ಇದರ ಬಗ್ಗೆ ಅರಣ್ಯ ತಕ್ಷೀರು ದಾಖಲು ಮಾಡಿಕೊಳ್ಳಲಾಗಿದೆ.

ಊ) ಈ ಬಗ್ಗೆ ಇಲ್ಲಿಯವರೆಗೆ ಯಾವುದೇ ನೋಟೀಸ್ ಜಾರಿಯಾಗಿರುವುದಿಲ್ಲ.

ಋ) ಉದ್ಭವಿಸುವುದಿಲ್ಲ.

768 (1197) ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ): ಮಾನ್ಯ ಯೋಜನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಳೆದ 3 ವರ್ಷಗಳ ಅವಧಿಯಲ್ಲಿ ಗಡಿ ಪ್ರದೇಶದ ಅಭಿವೃದ್ಧಿ ನಿಧಿಯ ಯೋಜನೆಯಿಂದ (ಬಿ.ಎ.ಡಿ.ಪಿ) ಹೈದ್ರಾಬಾದ್ ಕರ್ನಾಟಕ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಜಿಲ್ಲೆಗಳಲ್ಲಿ ಕೈಗೊಂಡಿರುವ ಕಾರ್ಯಕ್ರಮಗಳೇನು ಹಾಗೂ ಇದಕ್ಕಾಗಿ ಬಿಡುಗಡೆ ಮಾಡಿರುವ ಹಣವೆಷ್ಟು ; (ಜಿಲ್ಲಾವಾರು ಅಂಕಿ ಅಂಶಗಳನ್ನು ಒದಗಿಸುವುದು) ;

ಆ) ಪ್ರಸಕ್ತ ಸಾಲಿನಲ್ಲಿ ಈ ಯೋಜನೆಯಿಂದ ಮೇಲ್ಕಂಡ ಭಾಗದಲ್ಲಿ ಚಾಲನೆಯಲ್ಲಿರುವ ಕಾರ್ಯಕ್ರಮಗಳಾವುವು ; (ವಿಧಾನ ಸಭಾ ಕ್ಷೇತ್ರವಾರು ವಿವರಗಳನ್ನು ಒದಗಿಸುವುದು) ?

ಶ್ರೀ ರಾಮಚಂದ್ರ ಗೌಡ (ಯೋಜನಾ ಸಚಿವರು):

ಅ) ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆ ಮಾಡಿದ ಹಣವ ವಿವರ ಕೆಳಕಂಡಂತಿದೆ.

ಜಿಲ್ಲೆ	2003–04	2004–05	ರೂ. ಲಕ್ಷಗಳಲ್ಲಿ 2005–06
ಬೀದರ್	3.80	42.60	45.85
ಗುಲ್ಬರ್ಗ	10.04	39.16	42.60
ರಾಯಚೂರು	1.52	13.04	13.14
ಬಳ್ಳಾರಿ	22.52	19.56	19.71

ರಸ್ತೆ ಮತ್ತು ಸೇತುವೆ, ಶಾಲಾ ಕೊಠಡಿಗಳು, ಆಸ್ಪತ್ರೆ, ಅಂಗನವಾಡಿ ಹಾಗೂ ಪಶುವೈದ್ಯ ಕಟ್ಟಡಗಳು, ಗ್ರಾಮೀಣ ನೀರು ಸರಬರಾಜು ಕಾಮಗಾರಿಗಳು ಹಾಗೂ ಗ್ರಾಮೀಣ ವಿದ್ಯುದ್ದೀಕರಣ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ.

ಆ) ಈ ಕಾರ್ಯಕ್ರಮದಡಿ ಹಣವನ್ನು ಜಿಲ್ಲಾಧಿಕಾರಿಗಳಿಗೆ ತಾಲ್ಲೂಕುವಾರು ಬಿಡುಗಡೆ ಮಾಡಲಾಗಿದೆ. ವಿಧಾನಸಭಾ ಕ್ಷೇತ್ರವಾರು ಹಣ ಬಿಡುಗಡೆ ಮಾಡುವುದಿಲ್ಲ. ಪ್ರಸಕ್ತ ವರ್ಷದಲ್ಲಿ 13.11.2006ರಂದು 382 ಲಕ್ಷ ರೂ.ಗಳನ್ನು ತಾಲ್ಲೂಕಿಗೆ ತಲಾ 7.35 ಲಕ್ಷ ರೂ.ಗಳಂತೆ ಬಿಡುಗಡೆ ಮಾಡಲಾಗಿದೆ. ಈ ಹಣಕ್ಕೆ ಕ್ರಿಯಾ

ಯೋಜನೆಗಳನ್ನು ಬರಗೂರು ರಾಮಚಂದ್ರಪ್ಪನವರ ಅಧ್ಯಕ್ಷತೆಯ ಗಡಿನಾಡು ಅಧ್ಯಯನ ಆಯೋಗದ ಶಿಫಾರಸ್ಸುಗಳನ್ವಯ ಗಡಿಭಾಗದ ಅಭಿವೃದ್ಧಿಗೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕೆಂದು, ಎಲ್ಲಾ ಸಂಬಂಧಿತ ಶಾಸಕರಿಗೂ, ಜಿಲ್ಲಾಧಿಕಾರಿಗಳಿಗೂ ಪತ್ರ ಬರೆಯಲಾಗಿದೆ. ಅದರನ್ವಯ ಸಂಬಂಧಪಟ್ಟ ವಿಧಾಸಭೆಯ ಸದಸ್ಯರುಗಳೊಡನೆ ಸಮಾಲೋಚಿಸಿ ಕ್ರಿಯಾ ಯೋಜನೆ ತಯಾರಿಸಲಾಗುತ್ತಿದೆ.

770 (1101) ಶ್ರೀ ಮೋಹನ್ ಕೃಷ್ಣಶೆಟ್ಟಿ (ಕುಮಟಾ): ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕುಮಟಾ ವಿಧಾನ ಸಭಾ ಕ್ಷೇತ್ರದ ಕುಮಟಾ ಹಾಗೂ ಹೊನ್ನಾವರ ತಾಲೂಕುಗಳ ಸಣ್ಣ ನೀರಾವರಿ ಇಲಾಖೆಗೊಳಪಡುವ ಅನೇಕ ಗಜನಿಗಳಿಗೆ ಕಾರ್ಲಾಂಡುಗಳನ್ನು (ಉಪ್ಪು ನೀರು ತಡೆಗಳು) ನಿರ್ಮಾಣ ಮಾಡದೆ ಹಾಗೂ ಹಾಲಿ ಇರುವಂತಹವನ್ನು ದುರಸ್ತಿಗೊಳಿಸದಿರುವುದರಿಂದ ರೈತರು ತೊಂದರೆಗೀಡಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಬಂದಿದ್ದಲ್ಲಿ, ರೈತರ ಕೃಷಿ ಭೂಮಿಗೆ ಉಪ್ಪು ನೀರು ನುಗ್ಗಿ ಅಪಾರ ಪ್ರಮಾಣದ ಬೆಳೆ ಹಾನಿಗೀಡಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಇ) ಸಣ್ಣ ಕಾರ್ಲಾಂಡು ನಿರ್ಮಾಣಕ್ಕೆ ನೀರಾವರಿ ಇಲಾಖೆಯಿಂದ ಸರ್ಕಾರ ಕ್ರಮ ಕೈಗೊಳ್ಳುವುದು ಯಾವಾಗ ?

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು):

ಅ) ಬಂದಿದೆ.

ಆ) ಬಂದಿದೆ.

ಇ) ಅನುದಾನಕ್ಕನುಗುಣವಾಗಿ ಉಪ್ಪು ನೀರು ತಡೆ ನಿರ್ಮಾಣವನ್ನು ಕೈಗೊಳ್ಳಲಾಗುತ್ತಿದ್ದು, ಪ್ರಸಕ್ತ ಸಾಲಿನಲ್ಲಿ ಸಣ್ಣ ನೀರಾವರಿ ಇಲಾಖೆ ಒದಗಿಸಿರುವ ಪೂರಕ ಅನುದಾನದಲ್ಲಿ ಈ ಕೆಳಕಂಡ ಕಾಮಗಾರಿಯನ್ನು ಕೈಗೊಳ್ಳಲು ಯೋಜಿಸಲಾಗಿದೆ.

(ಲಕ್ಷ. ರೂ.ಗಳಲ್ಲಿ)

ಕ್ರ ಸಂ.	ಕಾಮಗಾರಿಯ ವಿವರ	ಅಂದಾಜು ಮೊತ್ತ	ರಕ್ಷಣೆ ಮಾಡಬಹುದಾದ ನೀರಾವರಿ ಕ್ಷೇತ್ರ
1.	ಹೆಬ್ಬೈಲ್ ಆನೆಗುಂದಿ ಹತ್ತಿರ ಕ್ವಾರಭೂಮಿ ಯೋಜನೆ	30.00	50 ಎಕರೆ